ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ 'ಸಿಎನ್‌ಸಿ ವೈರ್ ಕಟ್ ಎಲೆಕ್ಟ್ರಿಕ್ ಡಿಸ್‌ಚಾರ್ಜ್ ಮೆಷಿನ್' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಭಗವತಿ ಟೆಕ್ನಾಲಜೀಸ್, ಬೆಂಗಳೂರು ಇವರ ದಿನಾಂಕ: –ಇಲ್ಲ– ರ ಅರ್ಜಿ. (ಟಿನ್: 29751100792)

**

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮಡಿಯಲ್ಲಿ ನೋಂದಣಿದಾರರಾದ ಮೆ: ಭಗವತಿ ಟೆಕ್ನಾಲಜೀಸ್, ನಂ.170, 5ನೇ ಅಡ್ಡ ರಸ್ತೆ, 4ನೇ ಮುಖ್ಯ ರಸ್ತೆ, (ಹಳೆ ನಂ.11, 14ನೇ 'ಇ' ಕ್ರಾಸ್), ವಿಕ್ರಮ್ ಹೋಟೆಲ್ ಹಿಂಭಾಗ, ಇಂಡಸ್ಟ್ರಿಯಲ್ ಟೌನ್, ರಾಜಾಜಿನಗರ, ಬೆಂಗಳೂರು–560044 ಇವರು ಮೇಲ್ಕಂಡ ಅರ್ಜಿಯಲ್ಲಿ 'ಸಿಎನ್‌ಸಿ ವೈರ್ ಕಟ್ ಎಲೆಕ್ಟ್ರಿಕ್ ಡಿಸ್‌ಚಾರ್ಜ್ ಮೆಷಿನ್' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆ ಸಿಎಲ್‌ಆರ್/ಸಿಆರ್–120/13–14, ದಿ. 06–03–2014**

ಸಿಇಟಿ ಕೋಡ್ 8456.30.00ನಲ್ಲಿ ಬೀಳುವ 'ಸಿಎನ್‌ಸಿ ವೈರ್ ಕಟ್ ಎಲೆಕ್ಟ್ರಿಕ್ ಡಿಸ್‌ಚಾರ್ಜ್ ಮೆಷಿನ್' ಅನುಸೂಚಿತವಲ್ಲದ ಸರಕಾಗಿದ್ದು, 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)(iii) ರಂತೆ ದಿನಾಂಕ:01.08.2012ರಿಂದ ಶೇಕಡಾ 14.5ರಷ್ಟು ತೆರಿಗೆಗೊಳಪಡುತ್ತದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು

ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು